# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ : 210**
**ಸದಸ್ಯರ ಹೆಸರು : ಶ್ರೀ ವಿಜಯ ಸಿಂಗ್**
**(ವಿಧಾನ ಪರಿಷತ್ ಸದಸ್ಯರು)**
**ಉತ್ತರಿಸುವ ಸಚಿವರು : ಕಂದಾಯ ಸಚಿವರು**
**ಉತ್ತರಿಸುವ ದಿನಾಂಕ : 04.03.2020**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಮಿನಿ ವಿಧಾನಸೌಧ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ; ಮಿನಿ ವಿಧಾನಸೌಧಕ್ಕೆ ಸ್ಥಳ ಗುರುತಿಸಲಾಗಿದೆಯೇ; ಒಂದು ವೇಳೆ ಗುರುತಿಸಿದ್ದರೆ ಕಾಮಗಾರಿ ಪ್ರಾರಂಭ ಮಾಡುವುದು ಯಾವಾಗ; | ಬೀದರ್ ಮಿನಿ ವಿಧಾನಸೌಧ ನಿರ್ಮಾಣಕ್ಕೆ ಸರ್ಕಾರದ ಆದೇಶ ಸಂ:ಕಂಇ 67 ಡಬ್ಲ್ಯೂಬಿಆರ್ 2010, ದಿನಾಂಕ:17.08.2016 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಆದರೆ, ಮಿನಿ ವಿಧಾನಸೌಧ ಕಟ್ಟಲು ಉದ್ದೇಶಿಸಿದ್ದ ಜಾಗವನ್ನು ಬದಲಾಯಿಸಿ ತಹಶೀಲ್ದಾರ್, ಕಾರ್ಯಾಲಯದಲ್ಲಿಯೇ ನಿರ್ಮಾಣ ಮಾಡುವ ಬಗ್ಗೆ ಪರಿಷ್ಕೃತ ಪ್ರಸ್ತಾವನೆ ಸರ್ಕಾರದಲ್ಲಿ ಸ್ವೀಕೃತವಾಗಿದ್ದು, ಈ ವಿಷಯವು ಪರಿಶೀಲನೆಯಲ್ಲಿದೆ. |
| ಆ) | ಜಿಲ್ಲಾ ಕೇಂದ್ರ ಬೀದರ್‌ನಲ್ಲಿ ಜಿಲ್ಲಾಡಳಿತ ಕಛೇರಿಗಳ ಸಂಕೀರ್ಣ ನಿರ್ಮಾಣಕ್ಕೆ ಸ್ಥಳ ಅಂತಿಮಗೊಳಿಸಲಾಗಿದೆಯೇ; ಸ್ಥಳ ಅಂತಿಮಗೊಳಿಸಿದರೆ ನಿರ್ಮಾಣ ಕಾರ್ಯ ಯಾವಾಗ ಪ್ರಾರಂಭವಾಗಲಿದೆ? | ಬೀದರ್ ಜಿಲ್ಲಾ ಕಛೇರಿಗಳ ಸಂಕೀರ್ಣ ಕಟ್ಟಡ ನಿರ್ಮಾಣಕ್ಕೆ ಸರ್ಕಾರದ ಆದೇಶ ಸಂ:ಕಂಇ 91 ಡಬ್ಲ್ಯೂಬಿಆರ್ 2014, ದಿನಾಂಕ:24.12.2014 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು. ನಂತರ, ಈ ಮೊದಲು ಗುರುತಿಸಿದ್ದ ಜಾಗದ ಬದಲಾಗಿ ಬೇರೆ ಜಾಗದಲ್ಲಿ ಕಾಮಗಾರಿ ನಿರ್ಮಿಸಲು ಕಂಇ 91 ಡಬ್ಲ್ಯೂಬಿಆರ್ 2014, ದಿನಾಂಕ:18.02.2017 ರಂದು ತಿದ್ದುಪಡಿ ಆದೇಶ ಹೊರಡಿಸಲಾಗಿದೆ.<br><br>ಮುಂದುವರೆದು, ಈಗಾಗಲೇ ಜಿಲ್ಲಾ ಕಛೇರಿ ಸಂಕೀರ್ಣ ನಿರ್ಮಿಸಲು ಗುರುತಿಸಿದ್ದ ಜಾಗವನ್ನು ಬದಲಾಯಿಸಿ ಬೇರೆ ಜಾಗದಲ್ಲಿ ನಿರ್ಮಿಸಲು ಸ್ಥಳ ಗುರುತಿಸಿದ್ದು, ಸದರಿ ಜಾಗವನ್ನು |

| | | |
|---|---|---|
| | | ಮಂಜೂರು ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ. |

**ಕಂಇ 12 ಡಬ್ಲ್ಯೂಬಿಆರ್ 2020**

**(ಆರ್. ಅಶೋಕ)**
ಕಂದಾಯ ಸಚಿವರು